ಅಪ್ಪಳಿಸಿತು. ಸಾಲದು ಎಂಬಂತೆ ನಿನ್ನೆ ದುಷ್ಯಂತರಾವ್ ತೀರಿಕೊಂಡ ಸುದ್ದಿಯನ್ನು ಅಪರಿಚಿತನಂತೆ ವಾಮನ ಯಾರದೋ ಫೇಸ್‌ಬುಕ್ ಪೋಸ್ಟಿಂಗ್‌ನಲ್ಲಿ ತಿಳಿಯುವಂತಾಯ್ತು. ರಾವ್ ಕುಟುಂಬದ ಯಾರನ್ನೂ ವಾಮನ ತಿಳಿದಿರಲಿಲ್ಲ ಎಂದರೆ ನಂಬುವುದು ಕಷ್ಟವೇ. ದುಷ್ಯಂತರಾವ್ ತನ್ನನ್ನು ಬಿಟ್ಟರೆ ತನಗೆ ಸಂಬಂಧಿಸಿದ ಎಲ್ಲಾ ದೃಶ್ಯಗಳನ್ನೂ ಕಾಣದಂತೆ ಇರಿಸಿದ್ದರು. ಈ ಸುದ್ದಿಗಳಿಗೆಲ್ಲ ಶಿಖರವಿಟ್ಟಂತೆ ಟೋಕಿಯೊದಿಂದ ಈ ಬೆಳಗ್ಗೆ ಅತ್ತಿಗೆಯ ಫೋನ್ ಕಾಲ್ ಬಂದಿತ್ತು. ವಾಮನನ ಎದೆಯನ್ನೇ ನಡುಗಿಸಿದ ಫೋನ್ ಕಾಲ್ ಆಗಿತ್ತು. ಅಣ್ಣ ಜಗದೀಶ ಕೊರೊನಾದ ಕಾರಣದಿಂದ ಆಸ್ಪತ್ರೆಗೆ ದಾಖಲಾದ ವಿಷಯ ಅತ್ತಿಗೆ ಹೇಳಿದ್ದರು. ಆದರೆ, ಗಾಬರಿಯಾಗುವುದು ಬೇಡ ಎಂದು ಹೇಳಿದ್ದರು. ಹಾಗೆ ಹೇಳಿದರೂ ವಾಮನ, ''ನಾನು ಬಂದುಬಿಡಲೆ'' ಎಂದು ಅಸಹಾಯಕವಾಗಿ ಅತ್ತಿಗೆ ಬಳಿ ಕೇಳಿದ್ದ. ''ಬರುವ ಸಮಯವಲ್ಲ ವಾಮನ'' ಎಂದು ಹೇಳುತ್ತ ಅತ್ತಿಗೆ ಬಿಕ್ಕಿದ್ದು ಕೇಳಿಸಿದರೂ ಫೋನ್ ಕಟ್ ಆಗಿತ್ತು. ಎಲ್ಲವೂ ಅಯೋಮಯವೆನಿಸತೊಡಗಿತ್ತು. ಗಿಣಿಪುರದಲ್ಲಿ ಟಾಕ್ಲೆಯ ಸಾವು ಕೂಡಾ ಕೊರೊನಾದಿಂದಲೇ ಎಂಬುದು ತಿಳಿದ ವಿಷಯ. ಆ ದಿನವೇ ಟಾಕ್ಲೆಯ ಮಗ ಸತೀಶನಿಗೆ ವಾಮನ ಫೋನ್ ಮಾಡಿ ಧೈರ್ಯ ಹೇಳಿದ್ದ. ಪಂಡಿತ್ ದುರ್ಗಾದಾಸ್, ''ಭಗವಾನ್ ಕಾ ಸದಿಚ್ಛಾ ಐಸಾ ಹೋನೇತೋ ಮೈ ಕ್ಯಾ ಕರನಾ'' ಎಂದು ನಿಟ್ಟುಸಿರಿಟ್ಟಿದ್ದರು ಫೋನಿನಲ್ಲಿ. ಕೆಲ ದಿನಗಳ ಕಾಲ ಬರಬೇಡಿ. ಕಾಲ ಕೆಟ್ಟದ್ದಿದೆ ಎಂದು ಅವರೇ ವಾಮನನನ್ನು ಸಂತೈಸಿದ್ದರು. ದುಷ್ಯಂತರಾವ್ ಫೋನ್ ನಂಬರಿಗೆ ಫೋನ್ ಮಾಡಿದರೂ ಪ್ರಯೋಜನವಿಲ್ಲ ಎಂದು ಸ್ಮಾರ್ಟ್‌ಫೋನಿನಲ್ಲಿ ನಗುತ್ತಿದ್ದ ಭಂಗಿಯ ಅವರ ಫೋಟೊವನ್ನೇ ದಿಟ್ಟಿಸಿ ನೋಡತೊಡಗಿದ್ದ. ಅವರ ಸಾವು ಕೂಡಾ ದುರ್ದೈವವೋ ಎಂಬಂತೆ ಕೊರೊನಾದಿಂದಲೇ ಎಂಬುದನ್ನು ಫೇಸ್‌ಬುಕ್ ಪೋಸ್ಟಿಂಗ್‌ನಲ್ಲಿ ಓದಿದ್ದ.

ಅಣ್ಣ ಜಗದೀಶನ ಬಗೆಗೆ ಇನ್ನು ಕಣ್ಣೀರು ಸುರಿಸಬೇಕು ಅಂದರೆ ಕಣ್ಣೀರೇ ಬತ್ತಿಹೋಗಿದೆ ಎಂಬ ವಿಚಾರ ವಾಮನನಿಗೆ ದಟ್ಟವಾಗತೊಡಗಿತು. ಆದರೆ, ತನಗೆ ಬಂದ ಈ ವಿಚಾರದ ಬಗೆಗೆ ವಾಮನ ಸ್ವತಃ ತನ್ನ ಬಗ್ಗೆ ತಾನು ಕೆಂಡವಾದ. ಅಣ್ಣ ಬದುಕಿದ್ದಾನೆ, ಅಣ್ಣ ಬದುಕಿದ್ದಾನೆ ಮತ್ತು ಬದುಕಲಿದ್ದಾನೆ. ''ಆಯುಷ್ಯಂ, ತೇಜ, ಆರೋಗ್ಯಂ ದೇಹಿಮೇ ಹವ್ಯವಾಹನ'' ಎಂದು ಅಗ್ನಿಗೆ ಪ್ರತಿದಿನವೂ ಕೇಳುತ್ತಲೇ ಉಳಿದ. ದಿನಗಳು ನಿಧಾನವಾಗುತ್ತಿರುವ ಅನುಭವದಲ್ಲಿ, ಸುಡು ಬೆಂಕಿ ಉರುವಲವಿರದೆ ವಾಮನನ ಎದೆಯಲ್ಲಿ ಉರಿಯುತ್ತಲೇ ಇತ್ತು.

## ಮಹಾಬಲಮೂರ್ತಿ ಕೊಡ್ಲೆಕೆರೆ


ಕವಿ, ಕತೆಗಾರ, ಕಾದಂಬರಿಕಾರ ಮಹಾಬಲಮೂರ್ತಿ ಕೊಡ್ಲೆಕೆರೆ ಬ್ಯಾಂಕ್ ಅಧಿಕಾರಿಯಾಗಿ ನಿವೃತ್ತರು. ಹವ್ಯಾಸಿ ಯಕ್ಷಗಾನ ಕಲಾವಿದರಾಗಿ ಅಮೆರಿಕ, ಇಂಗ್ಲೆಂಡ್, ದುಬೈ ಹಾಗೂ ಫ್ರಾನ್ಸ್ ದೇಶಗಳಲ್ಲಿ ಪ್ರದರ್ಶನಗಳನ್ನು ನೀಡಿದ್ದಾರೆ.

ಪ್ರಕಟಿತ ಪುಸ್ತಕಗಳು: 'ಮಾತು ಮತ್ತು ಪರಸ್ಪರ', 'ಜೀವ', 'ಒಂದು ಗಿಳಿ', 'ಮತ್ತೆ ಏಳಲು ಪೂರ್ವದಿಂದ' (ಕವನ ಸಂಕಲನಗಳು), 'ಮತ್ತೊಂದು ಮೌನ', 'ಯಕ್ಷ ಸೃಷ್ಟಿ', 'ಅವನ ಜಗತ್ತಿನ ಹಗಲು', 'ನೆರಳು', 'ಇತಿಹಾಸದ ನಂತರ', 'ಆಗಂತುಕ' (ಕಥಾಸಂಕಲನಗಳು), 'ಚಂದ್ರಾಸ್ತಮಾನ', 'ಸದ್ದು', 'ದರ್ಶನ' (ಕಾದಂಬರಿಗಳು). ಅವರ ಕತೆ 'ವೈಶಂಪಾಯನ ತೀರ' ನಾಟಕ ಮತ್ತು ಟಿವಿ ಧಾರಾವಾಹಿಯಾಗಿ ಪ್ರದರ್ಶನ ಕಂಡಿದೆ.

ಐವತ್ತಕ್ಕೂ ಹೆಚ್ಚು ಯಕ್ಷಗಾನ ಕಲಾವಿದರ ಮತ್ತು ಸಾಂಸ್ಕೃತಿಕ, ಸಾಮಾಜಿಕ ರಂಗದ ಗಣ್ಯರ ಸಂವಾದ, ಸಂದರ್ಶನಗಳನ್ನು 'ಚಂದನ' ವಾಹಿನಿಗಾಗಿ ನಡೆಸಿಕೊಟ್ಟಿದ್ದಾರೆ.